ಎಂದು ಅಂದವರೇ, 'ನೀನು ಹೀಗೆನೆ ಬಿಳಿಕೇಪಳ ಹುಡುಕ್ತಾ ಇದ್ರೆ... ನಿನ್ನ ದೈವಕ್ಕೆ ನೀನು ಸ್ಥಾನ ಕಟ್ಟಿದ ಹಾಗೆಯೇ; ನಿಂಗೆ ಇನ್ನೂ ಒಂದು ಧೈರ್ಯಕ್ಕೆ ಬೇಕಾದ್ರೆ... ನಮ್ಮ ಕಟೀಲಿನ ದೊಡ್ಡ ಅಸ್ರಣ್ಣರನ್ನು ಒಮ್ಮೆ ಕೇಳಿ ನೋಡು, ಅವರ ಮಾತಂದ್ರೆ ಗುಡಿಯೊಳಗಿನ ದೇವಿಯ ಮಾತೇ ಸಮ...' ಎಂದಾಗ, ದೇವಪ್ಪಶೆಟ್ರು ನೆಮ್ಮದಿಯಿಂದ ನಿಟ್ಟುಸಿರು ಬಿಟ್ಟಿದ್ದರು.

'ಆಯ್ತು ತಂತ್ರಿಗಳೇ, ನಿಮಗಡ್ಡ ಬಿದ್ದೆ...' ಎಂದು ನಗುತ್ತಾ ತಂತ್ರಿಗಳಿಗೆ ಕೊಡುವ 'ಧನಗೌರವ'ವನ್ನು ಇಟ್ಟು ದೂರದಿಂದಲೇ ಅವರಿಗೆ ನಮಸ್ಕರಿಸಿ ತಂತ್ರಿಗಳ ಅಂಗಳಕ್ಕೆ ಬೆನ್ನು ಹಾಕಿದ್ದರು. ತಂತ್ರಿಗಳ ಅಂಗಳದಲ್ಲಿ ನಿರಾಳರಾದ ಈ ಪಟೇಲ್ರು, ಇನ್ನು ತನ್ನನ್ನೆಲ್ಲಿ ಮತ್ತೆ ಕಟೀಲಿಗೆ ಕರೆದುಬಿಡುತ್ತಾರೋ ಎಂಬ ಭಯದಲ್ಲಿದ್ದ ಶ್ರೀಧರಾಚಾರಿಯು, 'ಪಟ್ಲೆರೆ, ಕುಡುಂಬೂರಲ್ಲಿ ನಂಗೆ ಸ್ವಲ್ಪ ಕೆಲ್ಸ ಇದೆ; ಹಾಗೆ ಹೋಗಿ ಹೀಗೆ ಬಂದು ಬಿಡುತ್ತೇನೆ' ಎಂದು ವಿನಯದಲ್ಲೇ ಹೇಳಿ ಎಡಕ್ಕೆ ತಿರುಗಿಕೊಂಡುಬಿಟ್ಟ. ಏಕಾಂಗಿಯಾದ ಶೆಟ್ಟರು ಗಂಟಲ ಪದರಕ್ಕೆ ಸಿಲುಕಿದ್ದ ಮೀನ ಮುಳ್ಳು ಅನ್ನದುಂಡೆಯ ಜತೆಗೆ ಜಾರಿಹೋದಾಗ ಎಷ್ಟು ನಿರಾಳವಾಗಬಹುದೋ ಅಷ್ಟೇ ನಿರಾಳತೆಯ ಸುಖವನ್ನು ಅನುಭವಿಸುತ್ತ ನೇರವಾಗಿ ಬೈಕಂಡಿಗುತ್ತಿಗೆ ತೆರಳಲೆಂದು ರಾಜಬೀದಿಯ ದಾರಿ ಹಿಡಿದಿದ್ದರು. ಅವರು ಬೆಕಂಡಿಗುತ್ತಿನ ದಾರಿ ಹಿಡಿದ ಉದ್ದೇಶ : ಆ ಗುತ್ತಿನ ಗಡಿ ಹಿಡಿದ ಒಡೆಯ ಮಾರಪ್ಪಾಳ್ವರನ್ನು ಕಂಡು, ನಾಳೆ ಅವರೊಂದಿಗೆ ಕಟೀಲಿಗೆ ಹೋಗಿ, ದೊಡ್ಡ ಅಸ್ರಣ್ಣರನ್ನು ಕಂಡು ಬರುವುದು. ಮಾರಪ್ಪ ಆಳ್ವರು ತನ್ನ ಗುತ್ತಿನ ದೈವ ದೇವರಿಗೆ ಸಂಬಂಧಿಸಿದಂತೆ ಆ ದೊಡ್ಡ ಅಸ್ರಣ್ಣರನ್ನು ಕೇಳದೆ ಯಾವುದೇ ಒಂದು ಸಣ್ಣ ಕಡ್ಡಿಯನ್ನೂ ಆಚೀಚೆಗೆ ಇಡುವವರಲ್ಲ. 'ಗರ್ಭಗುಡಿಯ ಒಳಗಿರುವ ಉಳ್ಳಾಳ್ತಿಯೇ ಅವರ ನಾಲಿಗೆಯಲ್ಲಿರೋದು; ಅಸ್ರಣ್ಣರು ನುಡಿದರೆ... ಆ ಉಳ್ಳಾಳ್ತಿಯೇ ನುಡಿದಂತೆ...' ಎಂದು ನಂಬಿದವರು ಅವರು.

ಮಾರಪ್ಪ ಆಳ್ವರೇನು ದೇವಪ್ಪ ಶೆಟ್ಟರಿಗೆ ದೂರದವರಲ್ಲ. ಶೆಟ್ಟರ ಹೆಂಡತಿ ಚಂದ್ರಕ್ಕೆ ಮತ್ತು ಮಾರಪ್ಪಾಳ್ವರು ಅಕ್ಕ ತಂಗಿಯರ ಮಕ್ಕಳು. ದೈವ–ದೇವರ ಕೆಲಸಕ್ಕೆ, ಮದ್ವೆ–ಮಸ್ರಿಗಳಿಗೆ ಇವರಿಲ್ಲದೆ ಅವರಿಲ್ಲ; ಅವರಿಲ್ಲದೆ ಇವರಿಲ್ಲ. ಹಾಗೆ... ಕೊಡಿಮರದ ನೆಪದಲ್ಲಿ ಬೈಕಂಡಿಗುತ್ತಿಗೆ ಬಂದ ದೇವಪ್ಪಶೆಟ್ಟರು, ಮಾರಪ್ಪಾಳ್ವರನ್ನು ಒಪ್ಪಿಸಿಬಿಟ್ಟು, ಮರುದಿನವೆ ರುಕ್ಕನ ಗಾಡಿಯಲ್ಲಿ ಕಟೀಲಿನ ಅಸ್ರಣ್ಣರನ್ನು ಕಾಣಲು ಹೊರಟೇಬಿಟ್ಟರು. ಕುತ್ತೆತ್ತೂರು ವರೆಗೆ ಒಳದಾರಿಯಾಗಿ ಗಾಡಿಯಲ್ಲಿ ಹೋಗಿ ನಂತರ ಗಾಡಿಯನ್ನು ಹಿಂದಕ್ಕೆ ಕಳುಹಿಸಿ, ಹಾಗೆ ಕಾಲ್ನಡಿಗೆಯಲ್ಲೇ ತಿಬಾರುಗುತ್ತಿನೆಡೆಗೆ ತೋಡು, ಗದ್ದೆ, ಬೈಲುಗಳನ್ನು ದಾಟಿಕೊಂಡು ಹೊರಟರು. ಕಟೀಲಿಗೆ ಹೋಗುವಾಗಲೆಲ್ಲ ಅವರಿಬ್ಬರಿಗೂ, ತಿಬಾರುಗುತ್ತಿಗೆ ಮುಖ ಹಾಕಿ, ಕೊಡಮಂತಾಯ ದೈವದ ಗಂಧವನ್ನು ಒಂದಿಷ್ಟು ಹಣೆಗಿಟ್ಟು, ಆತನ ಬಾವಿಯ ತೀರ್ಥವನ್ನಷ್ಟು ಕುಡಿದು, ಆ ಗುತ್ತಿನ ಒಡೆಯರನ್ನು ಕಂಡು ಅವರ ಆಶೀರ್ವಾದ ಪಡೆಯದಿದ್ದರೆ – ಅವರ ಪಾಲಿಗೆ ಅದು ಪರಿಪೂರ್ಣವಾದ ಕಟೀಲು ಯಾತ್ರೆ ಎಂದು ಅನಿಸಿಕೊಳ್ಳುವುದೇ ಇಲ್ಲ.

ಇದೀಗ ಇವರಿಬ್ಬರೂ ತಿಬಾರುಗುತ್ತಿನ ಆನೆಬಾಗಿಲಿಗೆ ಬಂದಾಗ, ಗುತ್ತಿನ ಒಡೆಯರು ಚಾವಡಿಯ ಪಲ್ಲಂಗದಲ್ಲಿ ಕುಳಿತು ಮೇಲಂಗಳದಲ್ಲಿ ನಡೆಯುತ್ತಿದ್ದ 'ಧಾನ್ಯ ಹೊಡೆಯುವ' ಕೆಲಸವನ್ನು ಗಮನಿಸುತ್ತಿದ್ದರು. ಆನೆಬಾಗಿಲಾಗಿ ಬಂದವರನ್ನು ಕಿರಿದು ಕಣ್ಣಲ್ಲಿ ನೋಡಿದವರೇ ದಡಕ್ಕನೆ ಎದ್ದು ಬಂದು, 'ಹೋ...ಹೋ... ನನ್ನ ಅಳಿಯಂದಿರು! ಬಾರಿ ಅಪರೂಪ... ಬಾರೀ ಅಪರೂಪ ಏನಂತೆ ಇಲ್ಲಿವರೆಗೆ ಪಯಣ...' ಎಂದು ಬಾಯ್ತುಂಬ ಖುಷಿಯಿಂದ ಒಳಕರೆ ತಂದು